ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜ ನಿ : ಸುಮಪ : 2020–21 ದಿನಾಂಕ : 27–08–2020

# ಮಾಧ್ಯಮ ಆಮಂತ್ರಣ

1. ಶಿಕ್ಷಕ ಮಿತ್ರ– ಆಪ್ ಲೋಕಾರ್ಪಣೆ : (ಶಿಕ್ಷಕರ ಅನುಕೂಲಕ್ಕಾಗಿ ಮಾಡಿರುವ ಆಪ್) ಹಾಗೂ ವಿದ್ಯಾ ವಿನೀತ ಪುಸ್ತಕ ಬಿಡುಗಡೆ

   ಬಿ.ಎಸ್. ಯಡಿಯೂರಪ್ಪ,

   ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

   ದಿನಾಂಕ : 28–08–2020 ಶುಕ್ರವಾರ ಬೆಳಿಗ್ಗೆ 11–00 ಗಂಟೆಗೆ

   ಸ್ಥಳ : ಕೊಠಡಿ ಸಂಖ್ಯೆ 334, ಸಮ್ಮೇಳನ ಸಭಾಂಗಣ, ವಿಧಾನ ಸೌಧ, ಬೆಂಗಳೂರು

2. ಸಹಾಯವಾಣಿ – ಶಿಕ್ಷಣ ವಾಣಿ ಕೇಂದ್ರಕ್ಕೆ ಚಾಲನೆ ಹಾಗೂ ಶಿಕ್ಷಣ ಯಾತ್ರೆ ಪುಸ್ತಕ ಬಿಡುಗಡೆ

   ಎಸ್. ಸುರೇಶ್‌ಕುಮಾರ್ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು

   ದಿನಾಂಕ : 28–08–2020 ಶುಕ್ರವಾರ ಅಪರಾಹ್ನ 12–00 ಗಂಟೆಗೆ

   ಸ್ಥಳ : ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು

**3. ಮೆಗಾ ಇ –ಲೋಕ್ ಅದಾಲತ್ ಅನುಷ್ಠಾನ ಕುರಿತು ಪತ್ರಿಕಾಗೋಷ್ಠಿ :**

ನ್ಯಾಯಮೂರ್ತಿ ಅರವಿಂದ ಕುಮಾರ್, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯ ನಿರ್ವಾಹಕ ಅಧ್ಯಕ್ಷರು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಅಲೋಕ್ ಆರಾಧೆ, ಕರ್ನಾಟಕ ಉಚ್ಚ ನ್ಯಾಯಾಲಯದ ಕಾನೂನು ಸೇವಾ ಸಮಿತಿಯ ಅಧ್ಯಕ್ಷರು ಇವರಿಂದ

**ದಿನಾಂಕ : 28–08–2020 ಶುಕ್ರವಾರ, ಸಮಯ ಸಂಜೆ 5–15 ಗಂಟೆಗೆ**

**ಸ್ಥಳ : ಜಡ್ಜಸ್ ರೀಡಿಂಗ್ ರೂಂ, ಮೊದಲನೇ ಮಹಡಿ, ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು**

# ಪತ್ರಿಕಾ ಪ್ರಕಟಣೆ

## ಕರ್ನಾಟಕ ಶಾಸಕಾಂಗ ಪತ್ರಿಕೆ ಮತ್ತು 15ನೇ ವಿಧಾನ ಸಭೆಯ ಸದಸ್ಯರುಗಳ ಪರಿಚಯ ಪುಸ್ತಕ ಬಿಡುಗಡೆ

**ಬೆಂಗಳೂರು, ಆಗಸ್ಟ್ 27, (ಕರ್ನಾಟಕ ವಾರ್ತೆ) :**

ಕರ್ನಾಟಕ ಶಾಸಕಾಂಗ ಪತ್ರಿಕೆ ಒಂದು ಅತ್ಯುತ್ತಮ ವಿಷಯಗಳನ್ನು ಒಳಗೊಂಡ ಪತ್ರಿಕೆಯಾಗಿದ್ದು, ಇದರಲ್ಲಿ ರಾಜ್ಯದ ವಿಧಾನ ಮಂಡಲದ ಉಭಯ ಸಧನಗಳಲ್ಲಿ ಹಾಗೂ ಕೇಂದ್ರದ ಉಭಯ ಸಧನಗಳಲ್ಲಿ ನಡೆದ ಅತ್ಯುತ್ತಮ ಚರ್ಚೆ ಹಾಗೂ ಘಟನೆಗಳನ್ನು ಒಳಗೊಂಡ ಸಂಗ್ರಹ ಯೋಗ್ಯವಾಗಿದ್ದು ಎಂದು ಕರ್ನಾಟಕ ವಿಧಾನ ಪರಿಸತ್ ಸಭಾಪತಿ ಕೆ.ಪ್ರತಾಪ್‌ಚಂದ್ರ ಶೆಟ್ಟಿ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಇಂದು ವಿಧಾನಸೌಧದಲ್ಲಿ ಹಮ್ಮಿಕೊಂಡಿದ್ದ ಸರಳ ಕಾರ್ಯಕ್ರಮದಲ್ಲಿ ಕರ್ನಾಟಕ ವಿಧಾನ ಮಂಡಲ ಹೊರತಂದಿರುವ ಕರ್ನಾಟಕ ಶಾಸಕಾಂಗ ಪತ್ರಿಕೆ ಮತ್ತು 15ನೇ ವಿಧಾನ ಸಭೆಯ ಸದಸ್ಯರುಗಳ ಪರಿಚಯ ಪುಸ್ತಕಗಳ ಬಿಡುಗಡೆ ಮಾಡಿ ಮಾತನಾಡಿದ ಅವರು ಈ ಹಿಂದೆ ರಾಜ್ಯ ವಿಧನ ಮಂಡಲದಿಂದ ಈ ಪತ್ರಿಕೆಯನ್ನು ಹೊರತರಲಾಗುತ್ತಿತ್ತು, ಕಾಲಾನುಕ್ರಮದಲ್ಲಿ ಅದು ನಿಂತು ಹೋಗಿತ್ತು, ಈಗಿನ ಸಭಾಧ್ಯಕ್ಷರು ಪುನಃ ಅದಕ್ಕೆ ಚಾಲನೆ ನೀಡಿ ಪ್ರಸ್ತುತ ವಿದ್ಯಮಾನಗಳನ್ನು ದಾಖಲಿಸುವ ಪ್ರಕ್ರಿಯೆಗೆ ಚಾಲನೆ ನೀಡಿರುವುದು ಶ್ಲಾಘನೀಯ ಎಂದು ಹೇಳಿದರು.

ನಿಂತು ಹೋಗಿದ್ದ ಪತ್ರಿಕೆಯನ್ನು ಮತ್ತೆ ಆರಂಭಿಸಿರುವುದು ಜೊತೆಗೆ ಇದಕ್ಕೊಂದು ಕಾಯಕಲ್ಪ ನೀಡಿ ಮುಂದೆ ನಿಂತು ಹೋಗದಂತೆ ಹೊರತರುವುದು ಅತ್ಯಂತ ಜವಬ್ಧಾರಿಯುತ ಕೆಲಸವಾಗಿದೆ. ಈ ಕಾರ್ಯದಲ್ಲಿ ಪಾಲ್ಗೊಂಡವರಿಗೆ ಅಭಿನಂದನೆಗಳು. ಈ ಪುಸ್ತಕ ಜನಪ್ರತಿನಿಧಿಗಳು ಇರುವ ಎಲ್ಲಾ ಪಂಚಾಯತಿಗಳ ಸದಸ್ಯರುಗಳಿಗೆ ಸಹ ಲಭಿಸುವಂತಾಗಬೇಕು ಎಂದರು.

ನಂತರ ಮಾತನಾಡಿದ ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಪ್ರಸ್ತುತ ಸರ್ಕಾರಕ್ಕೆ ಒಂದು ವರ್ಷ ತುಂಬಿರುವ ಹಿನ್ನಲೆಯಲ್ಲಿ ಕರ್ನಾಟಕ ಶಾಸಕಾಂಗ ಪತ್ರಿಕೆಯ ಮೂರು ಆವೃತ್ತಿಗಳು ಮತ್ತು 15ನೇ ವಿಧಾನ ಸಭೆಯ ಸದಸ್ಯರುಗಳ ಪರಿಚಯ ಪುಸ್ತಕಗಳ ಬಿಡುಗಡೆಯನ್ನು ಇಂದು ಮಾಡಲಾಗಿದ್ದು, ಪತ್ರಿಕೆ ಪ್ರತಿ ಮೂರು ತಿಂಗಳಿಗೊಮ್ಮೆ ಬಿಡುಗಡೆಯಾಗುತ್ತದೆ. ಇದರಲ್ಲಿ ಅಧಿವೇಶನದಲ್ಲಿ ನಡೆದ ಮುಖ್ಯ ಸಂಗತಿಗಳಿಂದಿಡಿದು ವಿಧಾನ ಮಂಡಲದ ಸದಸ್ಯರು ಹಾಗೂ ಅಧಿಕಾರಿ/ಸಿಬ್ಬಂದಿಗಳು ಬರೆಯುವ ಅತ್ಯುತ್ತಮ ಲೇಖನಗಳನ್ನು ಪ್ರಕಟಿಸಲಾಗುವುದು ಎಂದರು.

ಕರ್ನಾಟಕ ವಿಧಾನ ಮಂಡಲ ಹೊರತರುತ್ತಿದ್ದ ಪತ್ರಿಕೆಯ ಪ್ರತಿ ಲೈಬ್ರರಿಯಲ್ಲಿ ಇತ್ತೀಚಿಗೆ ತಮ್ಮ ಕಣ್ಣಿಗೆ ಕಂಡಿದ್ದು ಹಾಗೂ ಉತ್ತರ ಪ್ರದೇಶ ರಾಜ್ಯದ ವಿಧಾನ ಮಂಡಲ ಹೊರ ತುರುತ್ತಿರುವ "ಸಂಸದೀಯ ದೀಪಿಕಾ" ತಮಗೆ ಈ ಪತ್ರಿಕೆಯನ್ನು ಮತ್ತೊಮ್ಮೆ ಹೊರತರಲು ಸ್ಪೂರ್ತಿಯಾಗಿದ್ದು ಎಂದು ಹೇಳಿದರು.

ವರ್ತಮಾನವನ್ನು ದಾಖಲಿಸಿದಾಗ ಮಾತ್ರ ಇತಿಹಾಸಕ್ಕೆ ಸರಿಯಾದ ದಾಖಲೆಯಾಗಬಲ್ಲದು, ಭವಿಷ್ಯದ ಜನ ಪ್ರತಿನಿಧಿಗಳಿಗೆ ಇದೊಂದು ಉತ್ತಮ ಪತ್ರಿಕೆಯಾಗುತ್ತದೆ ಎನ್ನುವ ವಿಶ್ವಾಸವಿದೆ. ಇಂದಿನ ಸದಸ್ಯರುಗಳು ಈ ಪತ್ರಿಕೆಯನ್ನು ಓದಲು ಹಾಗೂ ಪತ್ರಿಕೆಗೆ ಲೇಖನಗಳನ್ನು ಬರೆಯಲು ವಿನಂತಿಸುತ್ತೇನೆ ಎಂದು ಹೇಳಿದರು.

ಕಳೆದ ವರ್ಷ ರಾಜ್ಯದಲ್ಲಿ ನಡೆದ ಸರ್ಕಾರದ ಬದಲಾವಣೆಗಳ ಸಂದರ್ಭದಲ್ಲಿ ಶಾಸಕರ ಪರಿಚಯದ ಕಿರು ಪುಸ್ತಕವನ್ನು ಪ್ರಕಟಿಸಲು ಸಾಧ್ಯವಾಗಿರಲಿಲ್ಲ, ಪ್ರಸ್ತುತ ಸರ್ಕಾರ ಒಂದು ವರ್ಷ ಪೂರೈಸಿರುವ ಹಿನ್ನಲೆಯಲ್ಲಿ ಈಗ ಬಿಡುಗಡೆ ಮಾಡಲಾಗಿದ್ದು ಇದರಿಂದ ಸರ್ಕಾರಿ ನೌಕರರಿಗೆ ಹಾಗೂ ಸಾರ್ವನಿಕರಿಗೆ ತಮ್ಮ ಪ್ರತಿನಿಧಿಗಳ ಕುರಿತು ಸಂಪೂರ್ಣ ಮಾಹಿತಿ ಸಿಗಲಿದೆ. ಇದನ್ನು ಪಿಡಿಎಫ್ ಮಾದರಿಯಲ್ಲಿ ವಿಧಾನ ಮಂಡಲದ ಜಾಲತಾಣದಲ್ಲಿ ಸಹ ಅಪ್‌ಲೋಡ್ ಮಾಡಲಾಗುವುದು ಎಂದು ತಿಳಿಸಿದರು.

ವಿಧಾನಪರಿಷತ್ತಿನ ಕಾರ್ಯದರ್ಶಿ ಕೆ.ಆರ್.ಮಹಾಲಕ್ಷ್ಮಿ ಅವರು ಸ್ವಾಗತಿಸಿದರು ಹಾಗೂ ವಿಧಾನಸಭೆಯ ಕಾರ್ಯದರ್ಶಿ ವಿಶಾಲಾಕ್ಷಿ ಅವರು ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಹಿರಿಯ ಅಧಿಕಾರಿಗಳು ಸೇರಿದಂತೆ ಸಚಿವಾಲಾಯದ ಸಿಬ್ಬಂದಿಗಳು ಭಾಗವಹಿಸಿದ್ದರು.

# ಸಿ.ಟಿ.ರವಿ ಅವರ "ಹೆಜ್ಜೆ ಗುರುತು-ರಿಪೋರ್ಟ್ ಕಾರ್ಡ್" ಪುಸ್ತಕ ಬಿಡುಗಡೆ

ಬೆಂಗಳೂರು, ಆಗಸ್ಟ್ 27, (ಕರ್ನಾಟಕ ವಾರ್ತೆ) :

ಕೋವಿಡ್-19 ಹಿನ್ನಲೆಯಲ್ಲಿ ರಾಜ್ಯದ ಪ್ರವಾಸೋದ್ಯಮ ಸಂಕಷ್ಟದಲ್ಲಿದ್ದು, ಇಂತಹ ಸಮಯದಲ್ಲಿ ಮತ್ತೆ ಪ್ರವಾಸೋದ್ಯಮಕ್ಕೆ ಚಾಲನೆ ನೀಡುವ ಅಗತ್ಯವಿದ್ದು, ಇಂತಹ ಸಮಯದಲ್ಲಿ ಅನೇಕ ವಿನೂತನ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ ಎಂದು ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವರಾದ ಸಿ.ಟಿ. ರವಿ ಅವರು ಹೇಳಿದರು.

ಪ್ರಸ್ತುತ ಸರ್ಕಾರ ಒಂದು ವರ್ಷ ಪೂರೈಸಿರುವ ಹಿನ್ನಲೆಯಲ್ಲಿ ಸಚಿವರ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಗಳ ಒಂದು ವರ್ಷದ ಸಾಧನೆಯ ಮಾಹಿತಿಯನ್ನು ಒಳಗೊಂಡ ಕೈಪಿಡಿಯನ್ನು ಇಂದು ಮುಖ್ಯಮಂತ್ರಿಗಳು ಗೃಹ ಕಚೇರಿಯಲ್ಲಿ ಬಿಡುಗಡೆ ಮಾಡಿದ ನಂತರ ವಿಧಾನಸೌಧದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತಾನಾಡಿದ ಅವರು ತಾವು ನಿರ್ವಹಿಸುತ್ತಿರುವ ಇಲಾಖೆಗಳು ಒಂದಕ್ಕೊಂದು ಪೂರಕವಾಗಿದ್ದು, ಕೋವಿಡ್ ಲಾಕ್‌ಡೌನ್ ಹಿನ್ನಲೆಯಲ್ಲಿ ಅಷ್ಟೊಂದು ಸಾಧನೆ ಮಾಡಲು ಸಾಧ್ಯವಾಗಿರಲಿಲ್ಲವಾದರು ಮುಂದಿನ ವರ್ಷದ ಕಾರ್ಯಯೋಜನೆಗಳನ್ನು ಅತ್ಯಂತ ಸಮರ್ಪಕವಾಗಿ ರೂಪಿಸಲಾಗಿದೆ ಎಂದರು.

ಸಚಿವರು ತಮ್ಮ ಇಲಾಖೆಗಳ ಒಂದು ವರ್ಷದ ಸಾಧನೆ ಕುರಿತು ಹೊರತಂದಿರುವ ಪುಸ್ತಕಕ್ಕೆ "ಹೆಜ್ಜೆ ಗುರುತು-ರಿಪೋರ್ಟ್ ಕಾರ್ಡ್" ಎಂದು ಹೆಸರಿಟ್ಟಿದ್ದು ಇದೊಂದು ರೀತಿ ನನ್ನ ಕಾರ್ಯಗಳ ಮಾರ್ಕ್ಸ್ ಕಾರ್ಡ್ ಆಗಿದೆ ಎಂದು ಹೇಳಿದ ಅವರು ಕರ್ನಾಟಕದಲ್ಲಿ ಪ್ರವಾಸೋದ್ಯಮ ಕ್ರಾಂತಿ ಮಾಡಲು ವಿನೂತನ ಯೋಜನೆಯಗಳನ್ನು ರೂಪಿಸಲಾಗಿದ್ದು ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುವ ಹೊಸ ರೀತಿಯ ಪ್ರವಾಸೋದ್ಯಮ ಅವಕಾಶಗಳನ್ನು ತೆರೆಯಲು ರಾಜ್ಯ ಸನ್ನದ್ಧವಾಗಿದೆ.

ಸಾಹಿತಿಗಳು ಹಾಗೂ ಕಲಾವಿದರಿಗೆ ಮಾಸಾಶನ ಹೆಚ್ಚಳ: ಆರ್ಥಿಕ ಸಂಕಷ್ಟದಲ್ಲಿರುವ 60 ವರ್ಷ ಮೇಲ್ಪಟ್ಟ ಸಾಹಿತಿ ಕಲಾವಿದರಿಗೆ ನೀಡಲಾಗುತ್ತಿರುವ ಮಾಸಾಶನವನ್ನು ರೂ. 1500 ರಿಂದ 2000 ರೂ.ಗಳಿಗೆ ಹೆಚ್ಚಿಸಲಾಗಿದೆ. ಸುಮಾರು 14000 ಜನರು ಮಾಸಾಶನ ಪಡೆಯುತ್ತಿದ್ದಾರೆ.

ಸಾಹಿತಿ ಹಾಗೂ ಕಲಾವಿದರಿಗೆ ಸಹಾಯಧನ : ಕೋವಿಡ್-19 ರ ಹಿನ್ನೆಲೆಯಲ್ಲಿ ಸಾಂಸ್ಕೃತಿಕ, ಸಾಹಿತಿಕ ಚಟುವಟಿಕೆಗಳಿಗೆ ನಿರ್ಭಂಧ ಜಾರಿಯಲ್ಲಿರುವುದರಿಂದ ಕಲೆಯನ್ನೇ ನಂಬಿ ಜೀವನ ಸಾಗಿಸುತ್ತಿರುವ ಸಾಹಿತಿಗಳು ಹಾಗೂ ಕಲಾವಿದರಿಗೆ ರೂ. 2000 ಗಳಂತೆ ರಾಜ್ಯದ ಒಟ್ಟು 16924 ಕಲಾವಿದರಿಗೆ ರೂ. 3,38,48,000 ಗಳನ್ನು ಕಲಾವಿದರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿದೆ.

ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮೀಜಿಯವರ ಹುಟ್ಟೂರಾದ ರಾಮನಗರ ಜಿಲ್ಲೆಯ ವೀರಾಪುರ ಗ್ರಾಮದಲ್ಲಿ ಹಾಗೂ ಆದಿ ಚುಂಚನಗಿರಿ ಶ್ರೀಗಳಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಜನ್ಮ ಸ್ಥಳವಾದ ಬಾನಂದೂರಿನಲ್ಲಿ ಸಾಂಸ್ಕೃತಿಕ ಹಾಗೂ ಪಾರಂಪರಿಕ ಕೇಂದ್ರ ಸ್ಥಾಪನೆಗೆ ಕಾಮಗಾರಿ ಪ್ರಾರಂಭಿಸಲಾಗುವುದು.

ಚಿತ್ರದುರ್ಗ ಜಿಲ್ಲೆಯಲ್ಲಿರುವ ಶ್ರೀ ಮುರುಘಾ ಮಠದ ಆವರಣದಲ್ಲಿ 325 ಅಡಿ ಎತ್ತರದ ಶ್ರೀ ಜಗಜ್ಯೋತಿ ಬಸವೇಶ್ವರರ ಕಂಚಿನ ಪುತ್ಥಳಿಯನ್ನು ರೂ. 20.00 ಕೋಟಿಗಳ ವೆಚ್ಚದಲ್ಲಿ ಅಭಿವೃದ್ಧಿಗೊಳಿಸಲಾಗುವುದು.

ಬೆಂಗಳೂರಿನ ನಾಲ್ಕು ದಿಕ್ಕುಗಳಲ್ಲಿ ರವೀಂದ್ರ ಕಲಾಕ್ಷೇತ್ರದ ಮಾದರಿಯಲ್ಲಿ 60.00 ಕೋಟಿ ರೂ. ವೆಚ್ಚದಲ್ಲಿ ಕಲಾಕ್ಷೇತ್ರಗಳನ್ನು ನಿರ್ಮಿಸಲಾಗುವುದು.

ಸಂತ ಶಿಶುನಾಳ ಶರೀಫರ ಸಮಾದಿ ಹಾಗೂ ಶಿಶುನಾಳ ಗ್ರಾಮವನ್ನು ರೂ. 5.00 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೊಳಿಸುವುದು.

ಎಸ್. ನಿಜಲಿಂಗಪ್ಪನವರ ಮನೆಯನ್ನು ರೂ. 5.00 ಕೋಟಿಗಳ ವೆಚ್ಚದಲ್ಲಿ ಸ್ಮಾರಕವಾಗಿ ಅಭಿವೃದ್ಧಿಪಡಿಸುವುದು. ಖ್ಯಾತ ಸಾಹಿತಿ ಎಸ್.ಎಲ್. ಭೈರಪ್ಪ ಅವರ ಹುಟ್ಟೂರಾದ ಹಾಸನ ಜಿಲ್ಲೆಯ ಸಂತೇಶ್ವರ ಗ್ರಾಮವನ್ನು ರೂ. 5.00 ಕೋಟಿ ಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸುವುದು. ಲಂಭಾಣಿ ಸಂಸ್ಕೃತಿ, ಭಾಷೆಯನ್ನು ಉಳಿಸಲು ಬಂಜಾರ ಸಂಸ್ಕೃತಿ-ಭಾಷಾ ಅಕಾಡೆಮಿ ಪ್ರಾರಂಭಿಸುವುದು.

ಪ್ರವಾಸೋದ್ಯಮ ಇಲಾಖೆ :

2020-25 ರ ನೂತನ ಪ್ರವಾಸೋದ್ಯಮ ನೀತಿ ರೂಪಿಸಲಾಗಿದ್ದು ಕರಡು ನೀತಿ ಅಂತಿಮವಾಗಿದೆ. ಕಳೆದ ಐದು ವರ್ಷಗಳಿಂದ ಸ್ಥಗಿತಗೊಂಡಿದ್ದ ಗೋಲ್ಡನ್ ಚಾರಿಯಟ್ ರೈಲು ಸೇವೆ ಮರು ಸ್ಥಾಪನೆಗೆ ಕ್ರಮ ರೈಲ್ವೆ ನಿಗಮದೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಮೈಸೂರಿನಲ್ಲಿರುವ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರವನ್ನು 75.00 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕಗೊಳಿಸಲು ವರದಿ ತಯಾರಿಸಲಾಗಿದೆ.

ಕರ್ನಾಟಕ ಬಹು ಸಂಸ್ಕೃತಿಯನ್ನು ಉಳಿಸುವ ಹಾಗೂ ಅದನ್ನು ವಿವಿಧ ಆಯಾಮಗಳಲ್ಲಿ ದೇಶಿ-ವಿದೇಶಿ ಪ್ರವಾಸಿಗರಿಗೆ ಪರಿಚಯಿಸುವ ಹಾಗೂ ಅನುಭವವನ್ನು ಕಟ್ಟಿಕೊಡುವ ನಿಟ್ಟಿನಲ್ಲಿ "ಆದಿವಾಸಿ ಮತ್ತು ಬಂಜಾರ ಕಲ್ಚರಲ್ ಹೆರಿಟೇಜ್" ನಿರ್ಮಾಣದ ಕಲ್ಪನೆಗೆ ಚಾಲನೆ ನೀಡಲಾಗಿದೆ. ಇದಕ್ಕೆ 15.00 ಕೋಟಿ ರೂ. ಮೀಸಲಿರಿಸಲಾಗಿದೆ.

ಕೃಷಿ ಇಲಾಖೆ, ತೋಟಗಾರಿಕೆ ಹಾಗೂ ಪ್ರವಾಸೋದ್ಯಮ ಇಲಾಖೆಯ ಜಂಟಿ ಸಹಯೋಗದಲ್ಲಿ ಕೃಷಿ ಸಂಸ್ಕೃತಿಯನ್ನು ಪ್ರವಾಸಿಗರಿಗೆ ಕಟ್ಟಿಕೊಡಲು "ಅಗ್ರಿ ಟೂರಿಸಂ" ಯೋಜನೆಯನ್ನು ರೂಪಿಸಲಾಗುತ್ತಿದೆ. ರೂ 22.50 ಕೋಟಿಗಳ ವೆಚ್ಚದಲ್ಲಿ ಶ್ರೀ ಸವದತ್ತಿ ಯಲ್ಲಮ್ಮ ಕ್ಷೇತ್ರದಲ್ಲಿ ಪ್ರವಾಸಿ ನಿರ್ವಚನ ಕೇಂದ್ರವಾಗಿ ಅಭಿವೃದ್ಧಿ, ಸಸಿಹಿತ್ಲು ಕಡಲತೀರದಲ್ಲಿ ರೂ. 10.00 ಕೋಟಿಗಳ ವೆಚ್ಚದಲ್ಲಿ ಸರ್ಫಿಂಗ್ ಸ್ಕೂಲ್ ಹಾಗೂ ಮೂಲಭೂತ ಸೌಕರ್ಯ ನಿರ್ಮಾಣ. ಚಿತ್ರದುರ್ಗ ಕೋಟೆಯನ್ನು ರೂ. 8.15 ಕೋಟಿಗಳ ವೆಚ್ಚದಲ್ಲಿ ಸಮಗ್ರವಾಗಿ

ಅಭಿವೃದ್ಧಿಪಡಿಸುವುದು.  ರೂ 20.00ಗಳ ವೆಚ್ಚದಲ್ಲಿ ಕೊಪ್ಪಳ ಜಿಲ್ಲೆಯ ಆನೆಗೊಂದಿ ಬಳಿ ಅಂಜನಾದ್ರಿ ಬೆಟ್ಟದ ಸಮಗ್ರ ಅಭಿವೃದ್ಧಿ, ರೂ. 25.00 ಕೋಟಿ ವೆಚ್ಚದಲ್ಲಿ ಐತಿಹಾಸಿಕ ಪ್ರವಾಸಿ ತಾಣ ಬಾದಾಮಿ ಸಮಗ್ರ ಅಭಿವೃದ್ಧಿ, ಶ್ರೀರಂಗಪಟ್ಟಣ ಕೋಟೆಯನ್ನು ರೂ. 10.00 ಕೋಟಿಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸುವುದು.  ಅದೇ ರೀತಿ ಜೋಗ ಜಲಪಾತ ಪ್ರದೇಶವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಕ್ರಮವಹಿಸಲಾಗಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಅಂತರರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದಲ್ಲಿ ಸಾಧನೆ ಮಾಡಿದ ಪರಿಶಿಷ್ಟ ಜಾತಿಯ 311 ಮತ್ತು ಪರಿಶಿಷ್ಟ ಪಂಗಡದ 107 ಕ್ರೀಡಾಪಟುಗಳಿಗೆ ಈ ವರ್ಷ 165.00 ಲಕ್ಷ ರೂ. ಪ್ರೋತ್ಸಾಹಧನ ನೀಡಲಾಗಿದೆ.  ಕ್ರೀಡಾ ವಿದ್ಯಾರ್ಥಿ ವೇತನ ಹಾಗೂ ಶೈಕ್ಷಣಿಕ ಶುಲ್ಕ ಮರು ಪಾವತಿ ಯೋಜನೆಯಡಿಯಲ್ಲಿ 16 ಕ್ರೀಡಾಪಟುಗಳಿಗೆ 16.70 ಲಕ್ಷ ನಗದು ಪುರಸ್ಕಾರ ನೀಡಲಾಗಿದೆ. ರಾಜ್ಯದ ಪ್ರಥಮ ಬಾರಿಗೆ ಮಹಿಳೆಯರಿಗೆ "ಮಿಷನ್ ಸುಭದ್ರ" ಯೋಜನೆ ಜಾರಿಗೆ ತರಲಾಗಿದೆ.

ಕಂಠೀರವ ಕ್ರೀಡಾಂಗಣದ ಸಿಂಥಟಿಕ್ ಟ್ರಾಕ್‌ನ್ನು ರೂ. 4.50 ಕೋಟಿಗಳ ವೆಚ್ಚದಲ್ಲಿ ಅಭಿವೃದ್ಧಿಗೊಳಿಸುವುದು.  ರಾಜ್ಯದಲ್ಲಿ ಅಪೂರ್ಣಗೊಂಡಿರುವ 17 ಕ್ರೀಡಾಂಗಣದ ಕಾಮಗಾರಿಯನ್ನು ರೂ. 8.57 ಕೋಟಿ ವೆಚ್ಚದಲ್ಲಿ ಪೂರ್ಣಗೊಳಿಸಲಾಗುವುದು.  ರಾಜ್ಯದಲ್ಲಿ ಮೊದಲ ಬಾರಿಗೆ ಕೊರಗ, ಕಾಡುಕುರುಬ, ಸಿದ್ಧಿ, ಜೇನುಕುರುಬ, ಸೋಲಿಗ ಮೊದಲಾದ ಪರಿಶಿಷ್ಟ ಪಂಗಡದ ಯುವಜನರಿಗೆ  ವಿಶೇಷ ಕ್ರೀಡಾ ತರಬೇತಿ ಶಿಬಿರ/ಕ್ರೀಡಾಕೂಟ ಆಯೋಜಿಸಲಾಗುವುದು.  ಬಾಕಿ ಇರುವ 2017, 2018 ಹಾಗೂ 2019ನೇ ಸಾಲಿನ ಏಕಲವ್ಯ, ಜೀವಮಾನ ಸಾಧನೆ ಹಾಗೂ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗಳನ್ನು ಈ ವರ್ಷ ವಿತರಿಸಲಾಗುವುದೆಂದು ತಿಳಿಸಿದರು.

ಈ ಸಂದರ್ಭದಲ್ಲಿ  ಕೆ.ಎಸ್.ಟಿ.ಡಿ.ಸಿಯ ಅಧ್ಯಕ್ಷೆ ಶ್ರೀಮತಿ ಶೃತಿ, ಸರ್ಕಾರದ  ಅಪರ ಮುಖ್ಯ ಕಾರ್ಯದರ್ಶಿ ಶ್ರೀಮತಿ ಕಲ್ಪನ ಜೆ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, ನಿರ್ದೇಶಕ ರಂಗಪ್ಪ, ಪ್ರವಾವಾಸೋದ್ಯಮ ಇಲಾಖೆಯ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನೀಲ್‌ಕುಮಾರ್, ನಿರ್ದೇಶಕ ಕೆ.ಎನ್. ರಮೇಶ್,  ಕೆ.ಎಸ್.ಟಿ.ಡಿ.ಸಿ. ವ್ಯವಸ್ಥಾಪ ನಿರ್ದೇಶಕ ಕುಮಾರ್ ಪುಷ್ಕರ್, ಯುವಜನ ಮತ್ತು ಕ್ರೀಡಾ ಇಲಾಖೆಯ ಆಯುಕ್ತ ಶ್ರೀನಿವಾಸ್ ಅವರುಗಳು ಉಪಸ್ಥಿತರಿದ್ದರು.

## ಪಂಚಾಯತ್ ರಾಜ್ ಆಯುಕ್ತಾಲಯ ಕಚೇರಿಯ ಉದ್ಘಾಟನೆ

ಬೆಂಗಳೂರು, ಆಗಸ್ಟ್ 27(ಕರ್ನಾಟಕ ವಾರ್ತೆ):

ಗ್ರಾಮ ಪಂಚಾಯತಿಗಳಲ್ಲಿ ಆಸ್ತಿಗಳ ಖಾತೆ ವಿಷಯ  ಹಣಕಾಸಿನ ಬಳಕೆ ಬಗ್ಗೆ ಬಹಳಷ್ಟು ದೂರುಗಳು ಸರ್ಕಾರಕ್ಕೆ ಬರುತ್ತಿರುತ್ತವೆ. ಇಂತಹ ದೂರುಗಳ ಬಗ್ಗೆ ಕ್ಷಿಪ್ರವಾಗಿ ಭೇಟಿ ನೀಡಿ ತಪಾಸಣೆ ಮಾಡಲು

ಆಯುಕ್ತಾಲಯದಲ್ಲಿ ಅಧಿಕಾರಿಗಳ ವಿಚಕ್ಷಣದಳ ರಕ್ಷಿಸಬಹುದು. ಈ ದಳ ಪ್ರತಿ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ದೂರುಗಳ ಬಗ್ಗೆ ತನಿಖೆ ಮಾಡಿ ವರದಿ ಆಧರಿಸಿ, ಆಯುಕ್ತರು ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಬೇಕು. ಇದರಿಂದ ಗ್ರಾಮ ಪಂಚಾಯಿತಿಗಳು ನಿಯಮಾನುಸಾರ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತರದೆ. ಈ ಸಂಬಂಧ ಸರ್ಕಾರ ಎಲ್ಲ ರೀತಿಯ ಸಹಕಾರ ಮತ್ತು ಅಧಿಕಾರ ನೀಡಲು ಬದ್ಧವಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರು ತಿಳಿಸಿದರು.

ಇಂದು ನಗರದ ಕೆ.ಜಿ.ರಸ್ತೆಯಲ್ಲಿರುವ ಜಿಲ್ಲಾ ಪಂಚಾಯತ್ ಕಟ್ಟಡದಲ್ಲಿ ನೂತನವಾಗಿ ಆರಂಭವಾಗುತ್ತಿರುವ ಪಂಚಾಯತ್ ರಾಜ್ ಆಯುಕ್ತಾಲಯ ಕಛೇರಿಯ ಉದ್ಘಾಟನೆ ಮಾಡಿ ಮಾತನಾಡಿದ ಸಚಿವರು, ನಮ್ಮ ಸರ್ಕಾರ ಧೃಢ ಸಂಕಲ್ಪ ಮಾಡಿ ಪಂಚಾಯತ್‌ರಾಜ್ ಆಯುಕ್ತಲಯ ಸ್ಥಾಪಿಸಿರುವುದು ಸಂತೋಷದ ವಿಷಯ ಎಂದರು.

ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಗೆ ಐತಿಹಾಸಿಕ ಹಿನ್ನೆಲೆ ಇದೆ. ಸ್ವಾತಂತ್ರ್ಯ ಪೂರ್ವದಲ್ಲಿ ಪಂಚಾಯತ್ ರಾಜ್ ಕಲ್ಪನೆ ಬೇರೆ ಬೇರೆ ರೂಪದಲ್ಲಿತ್ತು. ಮಹಾತ್ಮ ಗಾಂಧಿಯವರು ಗ್ರಾಮ ಸ್ವರಾಜ್ ಕಲ್ಪನೆಗೆ ವಿಶೇಷವಾದ ಒತ್ತು ನೀಡಿ, ಪ್ರತಿಪಾದಿಸಿದ ನಂತರ ಪಂಚಾಯತ್‌ರಾಜ್ ವ್ಯವಸ್ಥೆಗೆ ವಿಶೇಷ ಮಹತ್ವ ಬಂದಿತು. ಸ್ವಾತಂತ್ರ್ಯ ನಂತರ ಬಂದ ಎಲ್ಲಾ ಸರ್ಕಾರಗಳು ಪಂಚಾಯತ್‌ರಾಜ್ ವ್ಯವಸ್ಥೆಗೆ ಹೆಚ್ಚಿಗೆ ಮನ್ನಣೆ ನೀಡಿದವು.

ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಒಂದು ಲಕ್ಷಕ್ಕೂ ಅಧಿಕ ಚುನಾಯಿತ ಪ್ರತಿನಿಧಿಗಳಿದ್ದಾರೆ. ಎಂಬತ್ತು ಸಾವಿರಕ್ಕೂ ಹೆಚ್ಚು ಅಧಿಕಾರಿ ನೌಕರರುಗಳಿದ್ದಾರೆ. ಪಂಚಾಯತ್‌ರಾಜ್ ಸಂಸ್ಥೆಗಳ ಮೂಲಕ ಕುಡಿಯುವ ನೀರು ಮತ್ತು ನೈರ್ಮಲ್ಯ, ಸ್ವ-ಉದ್ಯೋಗ, ಆರೋಗ್ಯ, ಶಿಕ್ಷಣ, ಮಹಿಳೆಯರ ಹಾಗೂ ಮಕ್ಕಳ ಕಲ್ಯಾಣ, ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಮೀನುಗಾರಿಕೆ, ಅರಣ್ಯ, ಗುಡಿ ಕೈಗಾರಿಕೆ, ಕ್ರೀಡೆ ಮುಂತಾದ ಹಲವು ಮಹತ್ವದ ಯೋಜನೆಗಳನ್ನು ಪಂಚಾಯತ್‌ರಾಜ್ ವ್ಯವಸ್ಥೆಯಡಿ ತರಲಾಗಿದೆ.

ನಮ್ಮ ಪಂಚಾಯತ್‌ರಾಜ್ ವ್ಯವಸ್ಥೆ ತುಂಬ ಬಲಯುತವಾಗಿದೆ. ಮೂರು ಹಂತದ ಪಂಚಾಯತ್ ಸಂಸ್ಥೆಗಳಲ್ಲಿ ಗ್ರಾಮ ಪಂಚಾಯತಿಗಳು ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ. ನರೇಗಾ ಯೋಜನೆಯಡಿ ಗ್ರಾಮೀಣ ಜನರಿಗೆ ಉದ್ಯೋಗ ಒದಗಿಸುವ ಜೊತೆಗೆ ಆಸ್ತಿಗಳನ್ನು ನಿರ್ಮಿಸುವಲ್ಲಿ ನಮ್ಮ ಗ್ರಾಮ ಪಂಚಾಯತಿಗಳು ದೇಶದಲ್ಲಿಯೇ ಮುಂಚೂಣಿಯಲ್ಲಿದೆ. ಪಂಚಾಯತ್‌ರಾಜ್ ಆಯುಕ್ತಾಲಯ ಸ್ಥಾಪನೆಯಿಂದ ವಿಕೇಂದ್ರೀಕರಣ ಸಂಸ್ಥೆಗಳು ಇನ್ನೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ.

ರಾಜ್ಯದ 30 ಜಿಲ್ಲಾ ಪಂಚಾಯಿತಿಗಳು 226 ತಾಲ್ಲೂಕು ಪಂಚಾಯಿತಿಗಳು, 6010 ಗ್ರಾಮ ಪಂಚಾಯತಿಗಳು ಇದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಳಿಂದ ಬಿಡುಗಡೆಯಾಗುವ ಬೃಹತ್ ಪ್ರಮಾಣದ ಅನುದಾನವನ್ನು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಬಳಕೆ ಮಾಡುತ್ತಿವೆ. ಗ್ರಾಮ ಪಂಚಾಯಿತಿಗಳಿಗೆ ವಿವಿಧ ಯೋಜನೆಗಳಡಿ 10.417 ಕೋಟಿ ರೂಗಳು ನೇರವಾಗಿ ಬಿಡುಗಡೆಯಾಗುತ್ತಿದೆ. 15ನೇ ಹಣಕಾಸು ಆಯೋಗದ ಅನುದಾನ ರಾಜ್ಯ ಸರ್ಕಾರದ ಶಾಸನ ಬದ್ಧ ಅನುದಾನ, ನರೇಗಾ ಹಾಗೂ ಸ್ವಚ್ಛ ಭಾರತ ಅಭಿಯಾನಗಳಲ್ಲಿ ಬೃಹತ್ ಮೊತ್ತದ ಅನುದಾನ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಯಾಗುತ್ತಿದೆ. ಗ್ರಾಮ ಪಂಚಾಯತಿಗಳಿಗೆ ತನ್ನದೇ ಆದ ಸ್ವಂತ ಸಂಪನ್ಮೂಲದ ಹಣವು ಸೇರುತ್ತಿದೆ ಎಂದು ಸಚಿವರು ತಿಳಿಸಿದರು.

ಬೃಹತ್ ಪ್ರಮಾಣದ ಅನುದಾನ ಬಳಕೆ ಮಾಡುವ ಗ್ರಾಮ ಪಂಚಾಯತಿಗಳ ಮೇಲ್ವಿಚಾರಣೆಯನ್ನು ಇದುವರೆವಿಗೂ ಸಚಿವಾಲಯದ ವತಿಯಿಂದಲೇ ನಿರ್ವಹಿಸಲಾಗುತ್ತಿದದ್ದು ಸಮರ್ಪಕವಾಗಿರಲಿಲ್ಲ. ಪಂಚಾಯತ್ ರಾಜ್ ಆಯುಕ್ತರು ಹಾಗೂ ನಿರ್ದೇಶಕರುಗಳು ರಾಜ್ಯ ವ್ಯಾಪಿ ಜಿಲ್ಲೆಗಳಲ್ಲಿ ಪ್ರವಾಸ ಮಾಡಬೇಕು. ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ ಪರಿಶೀಲನೆ ನಡೆಸಿ ಮಾರ್ಗದರ್ಶನ ಮಾಡಬೇಕು. ಪಂಚಾಯತ್ ರಾಜ್ ಸಂಸ್ಥೆಗಳು ಕಾಯ್ದೆಗೆ ಅನುಗುಣವಾಗಿ ಸಭೆಗಳನ್ನು ನಡೆಸುವುದು ಕ್ರಿಯಾ ಯೋಜನೆಗಳನ್ನು ತಯಾರಿಸುವುದು ನಿಯಮಾನುಸಾರ ಅನುಷ್ಠಾನಗೊಳಿಸುವುದು. ಈ ಬಗ್ಗೆ ಪರಿಶೀಲನೆಗೆ ನಿಯಮಗಳನ್ನು ರೂಪಿಸಿ ಆಯುಕ್ತಾಲಯವು ನಿಯಮಿತವಾಗಿ ಪರಿಶೀಲನೆ ನಡೆಸಬೇಕು ಎಂದು ಸಚಿವರು ತಿಳಿಸಿದರು.

ಗ್ರಾಮ ಪಂಚಾಯಿತಿಗಳ ಅನುದಾನ ಬಳಕೆ ಬಗ್ಗೆ ಸಾಕಷ್ಟು ಆಡಿಟ್ ಆಕ್ಷೇಪಣೆಗಳು ಇವೆ. ಸಾಮಾಜಿಕ ಪರಿಶೋಧನೆಯಲ್ಲಿಯೂ ಹಲವಾರು ಆಕ್ಷೇಪಣೆಗಳು ಇವೆ. ಆಡಿಟ್ ಆಕ್ಷೇಪಣೆಗಳ ಬಗ್ಗೆ ಕೈಗೊಂಡ ಕ್ರಮಗಳ ಬಗ್ಗೆ ಆಯುಕ್ತಾಲಯ ಪರಿಶೀಲನೆ ನಡೆಸಬೇಕು.

ಪಂಚಾಯತ್ ರಾಜ್ ಆಯುಕ್ತಾಲಯ ಉದ್ಘಾಟನೆಯ ಸಂದರ್ಭದಲ್ಲಿ ಕೆ.ಎಸ್. ಈಶ್ವರಪ್ಪನವರು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಾಂಸ್ಥಿಕ ಕ್ವಾರಂಟೈನ್ ಕೇಂದ್ರಗಳನ್ನು ನಿರ್ವಹಿಸುವುದು ಹೇಗೆ? ಮಾರ್ಗದರ್ಶಿಕೆ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗೃಹ ಕ್ವಾರಂಟೈನ್ ನಿರ್ವಹಣೆ ಮಾರ್ಗದರ್ಶಿಕೆ, ಗ್ರಾಮಪಂಚಾಯಿತಿ ಆಯವ್ಯಯ 2020-21, ವಿಕೇಂದ್ರೀಕರಣ ಹಿಡಿದ ದಾರಿ ನಡೆದ ದೂರ ಪುಸ್ತಕಗಳನ್ನು ಇದೇ ಸಂದರ್ಭದಲ್ಲಿ ಸಚಿವರು ಬಿಡುಗಡೆ ಮಾಡಿದರು.

ಈ ಪುಸ್ತಕಗಳು ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ವಿವರವಾದ ಮಾಹಿತಿ ಒಳಗೊಂಡಿವೆ. ಗ್ರಾಮ ಪಂಚಾಯತಿಯ ಆಯವ್ಯಯ ಕುರಿತಂತೆ ವಿವರ ಒಳಗೊಂಡಿವೆ. ಕೊರೋನ ಸಂದರ್ಭದಲ್ಲಿ ಕ್ವಾರಂಟೈನ್ ಕೇಂದ್ರಗಳ ನಿರ್ವಹಣೆ ಬಗ್ಗೆ ಮಾರ್ಗಸೂಚಿಗಳನ್ನು ಒಳಗೊಂಡಿದೆ.

ಕಾರ್ಯಕ್ರಮದಲ್ಲಿ ಸರ್ಕಾರದ ಪ್ರವಾಸ ಕಾರ್ಯದರ್ಶಿಗಳು ಎಲ್.ಕೆ. ಅತೀಕ್, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂಚಾಯತ್ ರಾಜ್) ಉಮಾ ಮಹದೇವನ್, ಪಂಚಾಯತ್ ರಾಜ್ ಆಯುಕ್ತಾಲಯದ ಆಯುಕ್ತರಾದ ಪ್ರಿಯಾಂಕ ಮೇರಿ ಫ್ರಾನ್ಸಿಸ್, ವಿವಿಧ ವಿಭಾಗದ ನಿರ್ದೇಶಕರು, ಹಿರಿಯ ಅಧಿಕಾರಿಗಳು, ಆಯುಕ್ತಾಲಯದ ಅಧಿಕಾರಿ/ಸಿಬ್ಬಂದಿಗಳು ಭಾಗವಹಿಸಿದ್ದರು.

## ಸಚಿವರ ಪ್ರವಾಸ

ಬೆಂಗಳೂರು, ಆಗಸ್ಟ್ 27, (ಕರ್ನಾಟಕ ವಾರ್ತೆ) :

ನಗರಾಭಿವೃದ್ಧಿ ಸಚಿವ ಬಿ.ಎ. ಬಸವರಾಜು ರಾಜು ಆಗಸ್ಟ್ 28 ರಂದು ರಾಮನಗರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಅಂದೇ ರಾತ್ರಿ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಚಿವರ ಪ್ರವಾಸ

**ಬೆಂಗಳೂರು, ಆಗಸ್ಟ್ 27, (ಕರ್ನಾಟಕ ವಾರ್ತೆ) :**

ವಸತಿ ಸಚಿವ ವಿ. ಸೋಮಣ್ಣ ಅವರು ಆಗಸ್ಟ್ 28 ರಂದು ಬೆಳಿಗ್ಗೆ ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ಕುಂಬಳಗೋಡುವಿಗೆ ಪ್ರವಾಸ ಕೈಗೊಂಡು ಅಂದೇ ಅಪರಾಹ್ನ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಚಿವರ ಪ್ರವಾಸ

**ಬೆಂಗಳೂರು, ಆಗಸ್ಟ್ 27, (ಕರ್ನಾಟಕ ವಾರ್ತೆ) :**

ಅಬಕಾರಿ ಸಚಿವ ಹೆಚ್. ನಾಗೇಶ್ ಅವರು ಆಗಸ್ಟ್ 28 ಮತ್ತು 29 ರಂದು ಕೋಲಾರ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಆಗಸ್ಟ್ 29 ರಂದು ಸಂಜೆ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಛಾಯಾಚಿತ್ರ ಶೀರ್ಷಿಕೆ )

ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಕೆ. ಪ್ರತಾಪ ಚಂದ್ರಶೆಟ್ಟಿ ಹಾಗೂ ಕರ್ನಾಟಕ ವಿಧಾನ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಕರ್ನಾಟಕ ಶಾಸಕಾಂಗ ಪತ್ರಿಕೆ ಹಾಗೂ ಕರ್ನಾಟಕ ವಿಧಾನ ಸಭಾ ಸದಸ್ಯರ ಪರಿಚಯ ಪುಸ್ತಕ ಬಿಡುಗಡೆ ಮಾಡಿದರು.

## ಫೋನ್-ಇನ್ ಕಾರ್ಯಕ್ರಮ

**ಬೆಂಗಳೂರು, ಆಗಸ್ಟ್ 27, (ಕರ್ನಾಟಕ ವಾರ್ತೆ) :**

ಬೆಂಗಳೂರು ಜಲಮಂಡಳಿಯ ವತಿಯಿಂದ ದಿ:29.08.2020 ರ ಶನಿವಾರದಂದು ಬೆಳಿಗ್ಗೆ 09:00 ರಿಂದ 10:30 ರವರೆಗೆ ಮಾನ್ಯ ಅಧ್ಯಕ್ಷರು, ಬೆಂಗಳೂರು ಜಲಮಂಡಳಿ ಇವರೊಂದಿಗೆ ನೇರ ಫೋನ್-ಇನ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ

ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಲು ಈ ಫೋನ್-ಇನ್ ಕಾರ್ಯಕ್ರಮವನ್ನು ಸದುಪಯೋಗ ಪಡಿಸಿಕೊಳ್ಳಲು ಕೋರಲಾಗಿದೆ. ಸಾರ್ವಜನಿಕರು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ; 080-22945119.ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆಯನ್ನು ತಿಳಿಸಿ ದೂರನ್ನು ನೀಡಲು ಕೋರಲಾಗಿದೆ.

## ಕೋವಿಡ್-19 ಹಿನ್ನೆಲೆಯಲ್ಲಿ ಮಕ್ಕಳ ಪಾಲನೆ-ಪೋಷಣೆಗಾಗಿ ಪ್ರತ್ಯೇಕ ಸ್ಥಳ

ಬೆಂಗಳೂರು, ಆಗಸ್ಟ್ 27, (ಕರ್ನಾಟಕ ವಾರ್ತೆ) :

ಸಮಗ್ರ ಮಕ್ಕಳ ರಕ್ಷಣಾ ಯೋಜನೆಯು ನಿರ್ಲಕ್ಷತೆಗೊಳಗಾದ, ಪರಿತ್ಯಜಿಸಲ್ಪಟ್ಟ, ದೌರ್ಜನ್ಯಕ್ಕೆ, ಶೋಷಣೆಗೆ ಒಳಗಾದ ಮತ್ತು ಕುಟುಂಬದಿಂದ ಬೇರ್ಪಟ್ಟ ಮಕ್ಕಳು ದುರ್ಬಲ ಸ್ಥಿತಿಗೆ ತಲುಪದಿರುವಂತೆ ತಡೆಯಲು ಹಾಗೂ ಇಂತಹ ಪ್ರಕರಣಗಳನ್ನು ಕಡಿಮೆ ಮಾಡಲು  ಬಾಲಮಂದಿರಗಳನ್ನು ಸ್ಥಾಪಿಸಲಾಗಿದೆ.

ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಹೊಸದಾಗಿ ದಾಖಲಾಗುವ ಮಕ್ಕಳನ್ನು ಕೋವಿಡ್-19 ಹಿನ್ನೆಲೆಯಲ್ಲಿ ಪ್ರತ್ಯೇಕವಾಗಿ ಇರಿಸುವುದು ಅವಶ್ಯಕವಾಗಿದ್ದು, ಸದರಿ ಮಕ್ಕಳನ್ನು ಪ್ರತ್ಯೇಕವಾಗಿರಿಸಲು ಗುರುತಿಸಲಾಗಿರುವ ಜಿಲ್ಲೆಗಳ ಸ್ಥಳಗಳ ವಿವರ ಇಂತಿದೆ.

ಬಾಗಲಕೋಟೆ ಜಿಲ್ಲೆಯ ಬಾಲಕರ ಸರ್ಕಾರಿ ಬಾಲಮಂದಿರ ಹಾಗೂ  ಬಾಲಕಿಯರ ಸರ್ಕಾರಿ ಬಾಲಮಂದಿರ ಎಪಿಎಂಸಿ, ನವನಗರ.

ಬೆಂಗಳೂರು ನಗರ ಜಿಲ್ಲೆಯ ಸೈಂಟ್ ಮೈಕಲ್ ಹೋಂ 80 ಫೀಟ್ ರೋಡ್ ಇಂದಿರಾನಗರ. ಮಾನವ ಚಾರಿಟೀಸ್, ನಂ.82, ಹೆಚ್‌ವಿಆರ್ ಲೇ ಔಟ್, ಕಾಮಾಕ್ಷಿಪಾಳ್ಯ ಬಾಲಕರಿಗಾಗಿ.  ಶಿಶು ಮಂದಿರ, ಟಿ.ಸಿ.ಪಾಳ್ಯ ಗೇಟ್, ಕೆ.ಆರ್.ಪುರಂ., ವಿದ್ಯಾರಣ್ಯ ನಂ.129, ಲಲಿತ ಭವನ, ಮಂಡೂರ, ವಿರ್ಗೋನಗರ, ಬೆಂಗಳೂರು ಪೂರ್ವ ಬಾಲಕಿಯರಿಗಾಗಿ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ  ಸ್ನೇಹ ಭಾರತಿ ಎಜುಕೇಷನ್  ತೆರೆದ ತಂಗುದಾಣ, ಎರಡನೇ ಮಹಡಿ, ನಂ.76, ಪ್ರಿಯದರ್ಶಿನಿ ಲೇಔಟ್, ಗೌರಿಬಿದನೂರು ರಸ್ತೆ, ದೊಡ್ಡಬಳ್ಳಾಪುರ ಬಾಲಕ ಹಾಗೂ ಬಾಲಕಿಯರಿಗಾಗಿ.

ಬೆಳಗಾವಿ ಬಾಲಕರಿಗಾಗಿ ಸರ್ಕಾರಿ ಬಾಲಕರ ಬಾಲಮಂದಿರ, ಬೆಳಗಾವಿ ವೀಕ್ಷಣಾಲಯ ಆವರಣ, ಶಿವಾಜಿನಗರ, 3ನೇ ಕ್ರಾಸ್ ಬೆಳಗಾವಿ.  ಬಾಲಕಿಯರಿಗಾಗಿ ಶ್ರೀ ಶಿವಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಸೃಷ್ಟಿ ಮಕ್ಕಳ ತೆರೆದ ತಂಗುದಾಣ, ಮಹಂತೇಶ್ ನಗರರ ಬೆಳಗಾವಿ.

ಬಾಲಕರಿಗಾಗಿ ಓನ್ ಸ್ವಾಪ್ ಸೆಂಟರ್, ಶಾಂತಿಧಾಮ ಆವರಣ, ಬಳ್ಳಾರಿ.  ಬಾಲಕಿಯರಿಗಾಗಿ ಸರ್ಕಾರಿ ಕಿವುಡ ಮಕ್ಕಳ ಶಾಲೆ ಶಾಂರಿಧಾಮ ಆವರಣ ಬಳ್ಳಾರಿ.

ಬಾಲಕರಿಗಾಗಿ ಅಪ್ನಾಘರ್ ನಿರ್ಗತಿಕ ಮಕ್ಕಳ ಕುಟೀರ ಕೇಂದ್ರ ರೈಲ್ವೆ ನಿಲ್ದಾಣದ ಹತ್ತಿರ ಬೀದರ್. ಬಾಲಕಿಯರಿಗಾಗಿ ವಿಶ್ವನಾಥ ಅನಾಥಾಶ್ರಮ , ನಿರ್ಗತಿಕ ಮಕ್ಕಳ ಕುಟೀರ, ಚಿಟ್ಟವಾಡಿ ಬೀದರ.

ಬಾಲಕರಿಗಾಗಿ ಮುಖ್ಯಸ್ಥರು, ಐಶ್ವರ್ಯ ಮಹಿಳಾ ಮಂಡಳಿ (ರಿ), ತೆರೆದ ತಂಗುದಾನ, ವಿಜಯಪುರ. ಬಾಲಕಿಯರಿಗಾಗಿ ವಿಜಯಲಕ್ಷ್ಮಿ ಇದುಕೇಷನ್ ಅಂಡ್ ಸೋಷಿಯಲ್ ವೆಲ್‌ಫೇರ್ ಸೊಸೈಟಿ (ರಿ)ತೆರೆದ ತಂಗುದಾಣ ವಿಜಯಪುರ.

ಚಾಮರಾಜನಗರ ಸಮಾಜ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದ ಮೊದಲನೇ ಮಹಡಿ ಬಾಲಕರಿಗೆ . ನೆಲಮಹಡಿ, ಬಾಲಕಿಯರಿಗೆ.

ಚಿಕ್ಕಬಳ್ಳಾಪುರ ಕೆ.ವಿ.ಗುರುಕುಲಾಶ್ರಮ, ಕಂದವಾರಬಾಗಿಲು ಬಾಲಕರಿಗೆ. ತೆರೆದ ತಂಗುದಾಣ, ರಿವಾರ್ಡ್ ಸಂಸ್ಥೆ, ಪ್ರಶಾಂತಿ ಬಾಲಮಂದಿರ ಹತ್ತಿರ ಬಾಲಕಿಯರಿಗೆ.

ಚಿಕ್ಕಮಗಳೂರು ಸರ್ಕಾರಿ ಬಾಲಕರ ಬಾಲಮಂದಿರ, ಜ್ಯೋತಿನಗರ, ಹೌಸಿಂಗ್ ಬೋರ್ಡ್ ಬಾಲಕರಿಗೆ. ಸಿಎಸ್ಐ ಹೆಣ್ಣು ಮಕ್ಕಳ ವಸತಿ ನಿಲಯ, ಬೇಲರೂ ರಸ್ತೆ ಬಾಲಕಿಯರಿಗೆ.

ಚಿತ್ರದುರ್ಗ ಗಾಂಧಿ ಮತ್ತು ಅಂಬೇಡ್ಕರ್ ನಿರ್ಗತಿಕ ಮಕ್ಕಳ ಕುಟೀರ, ಶ್ರೀ ಬಸವೇಶ್ವರ ವಿದ್ಯಾಸಂಸ್ಥೆ(ರಿ) ಬಾಲಕ ಹಾಗೂ ಬಾಲಕಿಯರಿಗಾಗಿ.

ದಕ್ಷಿಣ ಕನ್ನಡ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಕದ್ರಿ ಸಂಸ್ಥೆ ಬಾಲಕ ಹಾಗೂ ಬಾಲಕಿಯರಿಗಾಗಿ.

ದಾವಣಗೆರೆ ಡಾನ್ ಬಾಸ್ಕೋ ಸಂಸ್ಥೆ, ದೇವರಾಜ ಅರಸು ಬಡಾವಣೆ ಬಾಲಕರಿಗಾಗಿ. ಅಡೋರೇಸ್ ಛಾರಿಟಬಲ್ ವುಮೆನ್ ವೆಲ್‌ಫೇರ್ ಸೊಸೈಟಿ, ನವಜ್ಯೋತಿ ನಿಲಯ, ದೇವರಾಜ ಅರಸು ಬಡಾವಣೆ ಬಾಲಕಿಯರಿಗಾಗಿ.

ಧಾರವಾಡ ಕೆ.ಎನ್.ಹೆಚ್. ಬಾಯ್ಸ್ ಹಾಸ್ಟೆಲ್ ಹುಬ್ಬಳ್ಳಿ ದಯಾನಂದ ಧಾಮ, ಧಾರವಾಡ ಬಾಲಕರಿಗೆ. ಕೆ.ಎನ್.ಹೆಚ್. ಗರ್ಲ್ಸ್ ಹಾಸ್ಟೆಲ್, ಹುಬ್ಬಳ್ಳಿ, ಬಾಸೆಲ್ ವಿಷನ್ ಗರ್ಲ್ಸ್ ಹೋಂ , ಬಾಲಕಿಯರಿಗಾಗಿ.

ಗದಗ ಸರ್ಕಾರಿ ಬಾಲಕರ ಬಾಲಮಂದಿರ, ಸುಂಕನೂರು ಆಸ್ಪತ್ರೆ ಹತ್ತಿರ, ಹೆಲ್ತ್ ಕ್ಯಾಂಪ್, ಬೆಟಗೇರ ಬಾಲಕರಿಗಾಗಿ. ಸರ್ಕಾರಿ ಬಾಲಕಿಯರ ಬಾಲಮಂದಿರ, ಮುಖ್ಯ ಅಂಚೆ ಕಚೇರಿ ಹತ್ತಿರ ಬಾಲಕಿಯರಿಗಾಗಿ.

ಕಲ್ಬುರ್ಗಿ ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಆರ್ಗನೈಜೇಷನ್, ಘಾಟಗೆ ಲೇ ಔಟ್ ಬಾಲಕರಿಗಾಗಿ. ವಿಶ್ವಭಾರತಿ ಗ್ರಾಮೀಣ ಅಭಿವೃದ್ಧಿ ಮಹಿಳಾ ವಿಕಾಸ ಸಂಘಟನೆ, ನ್ಯೂ ಮಾಕ್ ಲೇಔಟ್ ಉದ್ಭವ ಹನುಮಾನ ದೇವಸ್ಥಾನದ ಹತ್ತಿರ ಬಾಲಕಿಯರಿಗಾಗಿ.

ಹಾಸನ ಅಲ್ಪಸಂಖ್ಯಾತರ ಇಲಾಖೆಯಡಿ ಖಾಲಿ ಇರುವ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಕೃಷ್ಣ ಅಂಧ ಮಕ್ಕಳ ಕೇಂದ್ರದ ಹತ್ತಿರ , ಹಾಸನ ವಸತಿ ನಿಲಯ ಬಾಲಕ ಹಾಗೂ ಬಾಲಕಿಯರಿಗಾಗಿ.

ಹಾವೇರಿ ಸಹರಾ ಸಂಸ್ಥೆ, ತೆರೆದ ತಂಗುದಾಣ, ರಾಜರಾಜೇಶ್ವರಿ ನಗರ, 1ನೇ ಮೈನ್, 1ನೇ ಕ್ರಾಸ್ ರಾಣೇಬೆನ್ನೂರು ಬಾಲಕರಿಗಾಗಿ. ವಿನಯ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ, ವಿನಯ್ ತೆರೆದ ತಂಗುದಾಣ, ಸೋಮೇಶ್ವರ ಬಡಾವಣೆ, 1ನೇ ಕ್ರಾಸ್ ಬ್ಯಾಡಗಿ ಬಾಲಕಿಯರಿಗಾಗಿ.

ಕೊಡಗು ಡಿ.ದೇವರಾಜ ಅರಸ್ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ದಾಸವಾಳ ಬೀದಿ, ಮಡಿಕೇರಿ ನಗರ ಬಾಲಕರಿಗಾಗಿ. ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ, ಸಂತ ಜೋಸೆಫರ ಕಾನ್ವೆಂಟ್ ಬಳಿ ಮಡಿಕೇರಿ ನಗರ ಬಾಲಕಿಯರಿಗಾಗಿ.

ಕೋಲಾರ ಬಾಲಕರ ಬಾಲಮಂದಿರ ಬಾಲಕರ ವೀಕ್ಷಣಾಲಯ ಬಾಲಕರಿಗೆ. ಬಾಲಕಿಯರ ಬಾಲ ಮಂದಿರ ಬಾಲಕಿಯರಿಗೆ.

ಕೊಪ್ಪಳ ನಂಬಿಕೆ ಮನೆ, ಕಲ್ವಾರಿ ಛಾಪಲ್ ಟ್ರಸ್ಟ್ , ಹೊಸಪೇಟೆ ರಸ್ತೆ ಬಾಲಕರಿಗೆ. ಮೈತ್ರಿ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯ, ಕುಷ್ಟಗಿ ರಸ್ತೆ ಬಾಲಕಿಯರಿಗೆ.

ಮಂಡ್ಯ ಸ್ನೇಹ ಸ್ಪರ್ಶ ಚಿಲ್ಡ್ರನ್ ಹೋಂ, ಬಂದೀಗೌಡ ಬಡಾವಣೆ ಬಾಲಕರಿಗೆ. ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಸಮಾಜ ಕಲ್ಯಾಣ ಇಲಾಖೆ, ಅಭಿನವ ಭಾರತಿ ಶಾಲೆ ಹಿಂಭಾಗ ಬಾಲಕಿಯರಿಗೆ.

ಮೈಸೂರು ದಿ ಲಾರ್ಡ್ಸ್ ಹೋಂ, ನಂ. 446, ಸನ್ಮಾರ್ಗ, 6ನೇ ಕ್ರಾಸ್, ಸಿದ್ದಾರ್ಥ ಲೇಔಟ್ ಬಾಲಕರಿಗೆ. ಬಾಪೂಜಿ ಮಕ್ಕಳ ಮನೆ, ನಂ. 151 ಎಫ್, 4ನೇ ಅಡ್ಡ ರಸ್ತೆ, ಗೋಕುಲಂ 3ನೇ ಹಂತ ಬಾಲಕಿಯರಿಗೆ.

ರಾಯಚೂರು ಸರ್ಕಾರಿ ಬಾಲಕರ ಬಾಲಮಂದಿರ, ಅಜಾದ್ ನಗರ ಬಾಲಕ ಹಾಗೀ ಬಾಲಕಿಯರಿಗೆ.

ರಾಮನಗರ ವಿದ್ಯಣ್ಣ ತೆರೆದ ತಮಗುದಾಣ, ನಂ.77, ಎಂ.ಜಿ.ರಸ್ತೆ, ಶ್ರೀರಾಮ ನಿಲಯ, ರೂ ಲೈಟ್ ಸರ್ಕಲ್ ಹತ್ತಿರ, ಚನ್ನಪಟ್ಟಣ ಟೌನ್, ರಾಮನಗರ ಜಿಲ್ಲೆ ಬಾಲಕರಿಗೆ. ಸರ್ಕಾರಿ ಬಾಲಕಿಯರ ಬಾಲಮಂದಿರ , ಮಲ್ಲೇಶ್ವರ ಬಡಾವಣೆ, ಐಜೂರು ವಾಟರ್ ಟ್ಯಾಂಕ್ ಸಮೀಪ, ರಾಮನಗರ ಟೌನ್ ಬಾಲಕಿಯರಿಗೆ.

ಶಿವಮೊಗ್ಗ ತಾಯಿ ಮನೆ ಸಂಸ್ಥೆ,ನಂದಿನಿ ಬಡಾವಣೆ, 5ನೇ ತಿರುವು ಆಲ್ಕೊಳ, ಶಿವಮೊಗ್ಗ ತಾಲ್ಲೂಕು, ಸಕಾಋಇ ಬಾಲಕರ ಬಾಲಮಂದಿರ, ಆಲ್ಕೊಳ ಶಿವಮೊಗ್ಗ ಬಾಲಕರಿಗೆ. ತೆರೆದ ತಂಗುದಾಣ ಸುರಭಿ ಮಹಿಳಾ ಮಂಡಳಿ (ರಿ), ದೂರವಾಣಿ ಕೇಂದ್ರ, ಕಾಸೀಪುರ ಶಿವಮೊಗ್ಗ ತಾಲ್ಲೂಕು ಬಾಲಕಿಯರಿಗೆ.

ತುಮಕೂರು ಬಾಲಕರ ಬಾಲಮಂದಿರದ 1ನೇ ಮಹಡಿ ಕೊಠಡಿ ಬಾಲಕ – ಬಾಲಕಿಯರ ಬಾಲಮಂದಿರದ 1ನೇ ಮಹಡಿಯ ಕೊಠಡಿ ಬಾಲಕಿಯರಿಗೆ

ಉಡುಪಿ ಸರ್ಕಾರಿ ವೀಕ್ಷಣಾಲಯ, ನೆಲ ಅಂತಸ್ತಿನ ಕೊಠಡಿ ಬಾಲಕರಿಗೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸುಪರ್ದಿಗೆ ಒಳಪಟ್ಟ ಇಲಾಖಾ ಸಿಬ್ಬಂದಿಗಳ ವಸತಿ ನಿಲಯ, ರಾಜ್ಯ ಮಹಿಳಾ ನಿಲಯದ ಹತ್ತಿರ, ನಿಟ್ಟೂರು, ಉಡುಪಿ ಬಾಲಕಿಯರಿಗೆ.

ಉತ್ತರ ಕನ್ನಡ ಜಿಲ್ಲೆಯ ಸರ್ಕಾರಿ ಬಾಲಕರ ಬಾಲಮಂದಿರ, ಶಿರಸಿ ಬಾಲಕರಿಗೆ. ಆಶಾನಿಕೇತನ ಕಿವುಡ ಮೂಕ ಮಕ್ಕಳ ಶಾಲೆ, ಮಾರಿಯಾ ನಗರ, ಕಾರವಾರ ಬಾಲಕಿಯರಿಗೆ.

ಯಾದಗಿರಿ ಕ್ಯಾಂಪೇಷನ್ ಚಾರಿಟಬಲ್ ಟ್ರಸ್ಟ್ ಕರುಣಾ ನಿಲಯ, ಶುಭಂ ಪೆಟ್ರೋಲ್ ಪಂಪ್ ಹಿಂಭಾಗ, ಹೈದ್ರಾಬಾದ್‌ರೋಡ್, ಯಾದಗಿರಿ ಬಾಲಕರಿಗೆ. ಜಿಲ್ಲಾ ಬಾಲಭವನ ಸೊಸೈಟಿ, ಸರ್ಕಾರಿ ಬಾಲಕಿಯ ಬಾಲಮಂದಿರ, ಹಿಂದಗಡೆ ಲೈನ್ ಕಾಲೋನಿ ಯಾದಗಿರಿ.

## ಸಾಮಾನ್ಯ ಭವಿಷ್ಯ ನಿಧಿಯ 2019-20ನೇ ಸಾಲಿನ ವಾರ್ಷಿಕ ಲೆಕ್ಕತ:ಖ್ತೆ ವೆಬ್‌ಸೈಟ್‌ನಲ್ಲಿ ಬಿಡುಗಡೆ

ಬೆಂಗಳೂರು, ಆಗಸ್ಟ್ 27, (ಕರ್ನಾಟಕ ವಾರ್ತೆ) :

ಕರ್ನಾಟಕ ಸರ್ಕಾರ ಅಖಿಲ ಭಾರತೀಯ ಸೇವಾನಿರತ (ಐ.ಎ.ಎಸ್) ಅಧಿಕಾರಿಗಳ ರಾಜ್ಯ ಶ್ರೇಷ್ಠ ನ್ಯಾಯಾಲಯ ಗೌರವಾನ್ವಿತ ನ್ಯಾಯಾಧೀಶರುಗಳ ಹಾಗೂ ರಾಜ್ಯ ಸರ್ಕಾರದ ಇತರ ಇಲಾಖೆ ಅಧಿಕಾರಿ ಹಾಗೂ ಸಿಬ್ಬಂದಿ ಮವರ್ಗದವರಿಗೆ ಕರ್ನಾಟಕ ಭವಿಷ್ಯ ನಿಧಿಯ 2019-20ನೇ ಸಾಲಿನ ವಾರ್ಷಿಕ ಲೆಕ್ಕತ:ಖ್ತೆಗಳನ್ನು ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಲಾಗಿದೆ.

ವಂತಿಕೆದಾರರು ತಮ್ಮ ಸಾಮಾನ್ಯ ಭವಿಷ್ಯ ನಿಧಿಯ 2019-20ನೇ ಸಾಲಿನ ವಾರ್ಷಿಕ ಲೆಕ್ಕತ:ಖ್ತೆಗಳನ್ನು ಪ್ರಧಾನ ಮಹಾಲೇಖಪಾಲರು, ಕರ್ನಾಟಕ ಕಛೇರಿಯ ವೆಬ್‌ಸೈಟ್ http://www.agkar.cag.gov.in ವಿಳಾಸದಿಂದ ಪಡೆಯಬಹುದಾರಿದೆ.

ವಂತಿಕೆದಾರರ ಅನುಕೂಲಕ್ಕಾಗಿ ಸಾಮಾನ್ಯ ಭವಿಷ್ಯ ನಿಧಿಯ ವಾರ್ಷಿಕ ಲೆಕ್ಕತ:ಖ್ತೆಗಳನ್ನು ಹೆಚ್.ಆರ್.ಎಂ.ಸ್. ವೆಬ್‌ಸೈಟ್ ವಿಳಾಸ http://www//hrms.karnataka.gov.in ರಿಂದ ಸಂಬಂಧಪಟ್ಟ ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳ ಮೂಲಕ ಪಡೆದುಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗಿದೆ.

ವಂತಿಕೆದಾರರು ವೆಬ್‌ಸೈಟ್‌ನಿಂದ ವಾರ್ಷಿಕ ಲೆಕ್ಕತ:ಖ್ತೆಗಳನ್ನು ಪಡೆಯಲು ತೊಂದರೆ ಎದುರಾದಲ್ಲಿ ಈ ಕಛೇರಿಯ ಇ-ಮೇಲ್ ವಿಳಾಸ (agpf.kar@nic.in)ಕ್ಕೆ ಅಥವಾ ದೂರವಾಣಿ ಸಂಖ್ಯೆ : 080-22640310 ಸಂಪರ್ಕಿಸಬಹುದಾಗಿದೆ.

ವಂತಿಕೆದಾರರು ತಮ್ಮ ವಾರ್ಷಿಕ ಲೆಕ್ಕತ:ಖ್ತೆಯಲ್ಲಿ ವಂತಿಕೆ ಹಾಗೂ ಅಂತಿಮ/ಮುಂಗಡ/ಭಾಗಶ: ಹಿಂತೆಗೆತದ ವಿಷಯವಾಗಿ ಏನಾದರೂ ಲೋಪದೋಷಗಳು ಕಂಡುಬಂದಲ್ಲಿ ಹಿರಯ ಲೇಖಾಧಿಕಾರಿ, ಪ್ರಧಾನ ಮಹಾಲೇಖಪಾಲಕರ ಕಛೇರಿ, ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು-560001 ಇವರಿಗೆ ಪತ್ರ ಬರೆಯಬಹುದಾಗಿದೆ ಅಥವಾ ದೂರವಾಣಿ ಸಂಖ್ಯೆ : 080-2264691 ನ್ನು ಸಂಪರ್ಕಿಸಬಹುದಾಗಿದೆ.

## Phone-in program

## Bengaluru, August 27 (Karnataka Information)

**BWSSB is conducting a Phone-in program with Chairman, BWSSB on 29.08.2020 i.e., on Saturday from 09:00 am to 10:30 am. So we are here by requesting the public to discuss and redressal the grievances concerned with the Water Billing, Manhole Overflowing, Meter Reading issues and Improper Water Supply and Sanitary issues. Public can contact through the phone number: 080-22945119. It is requested to Consumers to give the R.R.Number details before raising complaint.**

## ಕೆ ಎಸ್ಆರ್ ಟಿ ಸಿ ಯಕೆಂಪೇಗೌಡ ಬಸ್ ನಿಲ್ದಾಣದಲ್ಲಿ "ಸ್ತ್ರೀ ಶೌಚಾಲಯ" ಪ್ರಾರಂಭ

**ಬೆಂಗಳೂರು, ಆಗಸ್ಟ್ 27, (ಕರ್ನಾಟಕ ವಾರ್ತೆ ):**

ದಿನಾಂಕ: 27.08.2020 ರಂದು, ಕೆ ಎಸ್ಆರ್ ಟಿ ಸಿ,ಕೆಂಪೇಗೌಡ ಬಸ್ ನಿಲ್ದಾಣದಲ್ಲಿ,ಸನ್ಮಾನ್ಯ ಉಪ ಮುಖ್ಯ ಮಂತ್ರಿಗಳು, ಸಾರಿಗೆಇಲಾಖೆ, ಕರ್ನಾಟಕ ಸರ್ಕಾರರವರು, ನಿಗಮವು ಅನುಷ್ಟಾನಗೊಳಿಸಿರುವ ನೂತನಉಪಕ್ರಮ"ಸ್ತ್ರೀ ಶೌಚಾಲಯ"ವನ್ನು ಉದ್ಘಾಟಿಸಿದರು. ಶ್ರೀ.ಶಿವಯೋಗಿ ಸಿ.ಕಳಸದ, ಭಾಆಸೇ, ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಆರ್ಟಿಸಿ, ಶ್ರೀ. ಹೇಮಂತ್, ಮುಖ್ಯಸ್ಥರು, **(CSR)BIAL,**ಡಾ.ರಾಮ್ ನಿವಾಸ್ ಸೆಪಟ್, ಭಾಪೊಸೇ, ನಿರ್ದೇಶಕರು (ಭ&ಜಾ), ಶ್ರೀ.ಟಿ.ವೆಂಕಟೇಶ್, ಕಆಸೇ,ನಿರ್ದೇಶಕರು(ಸಿ&ಪ), ಕರಾರಸಾಸಂಸ್ಥೆ ರವರುಗಳು ಉಪಸ್ಥಿತರಿದ್ದರು.

ಕೆಎಸ್ಆರ್ಟಿಸಿಯು ಒಂದುಅನುಪಯುಕ್ತ ಬಸ್ಸನ್ನು(Scrap Bus) ಸುಸಜ್ಜಿತ ಮಹಿಳಾ ಶೌಚಾಲಯವನ್ನಾಗಿ ನಿರ್ಮಿಸಲಾಗಿದೆ. ಇದನ್ನು"ಸ್ತ್ರೀ ಶೌಚಾಲಯ"ಎಂದುಹೆಸರಿಸಲಾಗಿದೆ. ಸ್ವಚ್ಛತೆಯತ್ತ ಮತ್ತೊಂದು ಹೆಜ್ಜೆಯನ್ನುಇಟ್ಟಿದೆ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ ಬೆಂಗಳೂರು ರವರು ಸದರಿ ಶೌಚಾಲಯದ ವೆಚ್ಚವನ್ನುತಮ್ಮ ಸಾಮಾಜಿಕ ಕಳಕಳಿ(**CSR)** ಯೋಜನೆಯಡಿ ನೀಡಿರುತ್ತಾರೆ.
ಸದರಿ ಶೌಚಾಲಯದಲ್ಲಿ ಮಗುವಿಗೆ ಹಾಲುಣಿಸುವ ಸ್ಥಳ, ಸ್ಯಾನಿಟರಿ ನ್ಯಾಪ್‌ಕಿನ್ ವೆಂಡಿಂಗ್‌ಯಂತ್ರ, ಇನ್ಸಿನಿರೇಟರ್, ಮಗುವಿಗೆ ಡೈಪರ್ ಬದಲಿಸುವ ಸ್ಥಳ, ಭಾರತೀಯಮತ್ತುವಿದೇಶಿ

ಮಾದರಿಯಶೌಚಾಲಯಗಳು, ಕೈ ತೊಳೆಯುವ ಬೇಸಿನ್‌ಗಳು, ಸಂವೇದಕ ದೀಪಗಳು, ಸಂಪೂರ್ಣಸೌರ ವಿದ್ಯುತ್ ಅಳವಡಿಸಲಾಗಿದೆ. ಶೌಚಾಲಯದನಿರ್ಮಾಣ ವೆಚ್ಚ ಒಟ್ಟು ರೂ.12 ಲಕ್ಷಗಳಾಗಿರುತ್ತದೆ.
ಮಹಿಳಾ ಸ್ವಾಸ್ಥ್ಯ ಸಮಾಜ ನಿಗಮದಕಾಲಜಿಯಾಗಿದೆ. ದೇಶದರಸ್ತೆ ಸಾರಿಗೆ ನಿಗಮಗಳಲ್ಲಿಯೇ ಪ್ರಪ್ರಥಮ ಭಾರಿಗೆಇಂತಹ ಸುಸಜ್ಜಿತ ಶೌಚಾಲಯವನ್ನುಅನುಪಯುಕ್ತ ಬಸ್ಸಿನಲ್ಲಿ ನಿರ್ಮಿಸಲಾಗಿದೆ. ನಿಗಮವು ಹಲವು ಮಹಿಳಾ ಸ್ನೇಹಿ ಉಪಕ್ರಮಗಳನ್ನು ಜಾರಿಗೆತಂದಿದೆ. ಬಸ್ ನಿಲ್ದಾಣ ಹಾಗೂ ಬಸ್ಸುಗಳನ್ನು ಮಹಿಳಾ ಸ್ನೇಹಿಯಾಗಿಸುವ ನಿಟ್ಟಿನಲ್ಲಿ ನಮ್ಮ ಪ್ರಯತ್ನವು ನಿತಂತರವಾಗಿ ಮುಂದುವರೆದಿದೆ.

ಬಸ್ ನಿಲ್ದಾಣಗಳಲ್ಲಿ ಮಹಿಳಾ ಪ್ರಯಾಣಿಕರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರೊಂದಿಗೆ ಸ್ವಚ್ಛತೆಗೆ ಹೆಚ್ಚಿನಆದ್ಯತೆ ನೀಡುವುದು ಪ್ರಮುಖ ಕಾಳಜಿಯೆಂದು ನಿಗಮವು ಮನಗಂಡಿದೆ. ಸ್ವಚ್ಛ ಹಾಗೂ ಆರೋಗ್ಯಕರ ಪರಿಸರ ನಿಗಮದ ಪ್ರಥಮಆದ್ಯತೆಯಾಗಿದ್ದು, ಕೊವಿಡ್-19 ಸಂದರ್ಭದಲ್ಲಿ ಸದರಿ ಶೌಚಾಲಯ ಪ್ರಾರಂಭ ಮಾದರಿಯಾಗಲಿದೆ. ಸ್ವಚ್ಛ ಭಾರತದ ಪರಿಕಲ್ಪನೆಯನ್ನುದಸಾಕಾರ ಮಾಡುವ ನಿಟ್ಟಿನಲ್ಲಿ ಕೆ ಎಸ್‌ಆರ್ ಟಿ ಸಿ ಯ ಪ್ರಯತ್ನ ಶ್ಲಾಘನೀಯಎಂದು ಸನ್ಮಾನ್ಯ ಮುಖ್ಯಮಂತ್ರಿಗಳು, ಸಾರಿಗೆಇಲಾಖೆಯವರು ತಿಳಿಸಿದರು. ಇದೇರೀತಿಯಲ್ಲಿಅನುಪಯುಕ್ತ ಬಸ್ಸುಗಳನ್ನು ವಿವಿಧ ಯೋಜನೆಗಳಿಗೆ ಉಪಯೋಗಿಸಲು ಸಲಹೆ ನೀಡಿದರು. ಸದರಿ ಬಸ್ಸುಅನುಪಯುಕ್ತವಾಗಿರುವುದರಿಂದ ಚಲಿಸುವುದಿಲ್ಲ. ಕೆಂಪೇಗೌಡ ಬಸ್ ನಿಲ್ದಾಣ , ಟರ್ಮಿನಲ್-1 ರಲ್ಲಿ ಮಹಿಳಾ ಪ್ರಯಾಣಿಕರ ಸೇವೆಗಾಗಿ ನಿಲ್ಲಿಸಲಾಗಿರುತ್ತದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.